ಯಾವುದು ಲಾಸ್ಟ್ ನಂಬರ್ ಬಂದಿದೆ, ಆ ಜಿಲ್ಲೆಗೆ ಹೆಚ್ಚು ಒತ್ತನ್ನು ಕೊಟ್ಟು ಎಲ್ಲಾ ರೀತಿಯಿಂದ ಅನುಕೂಲಗಳನ್ನು ಮಾಡಿ ಬರುವಂಥ ದಿನಗಳಲ್ಲಿ ಉತ್ತಮವಾದ ರಿಸಲ್ಟ್ ಬರುವಂತೆ ಮಾಡಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಮುಕ್ತಾಯಗೊಳಿಸಲಾಗಿದೆ. ಉಳಿದವನ್ನು ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿ. ದಯಮಾಡಿ ಸಹಕರಿಸಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, 22.03.2006ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳಲ್ಲಿ 28 ಉತ್ತರಗಳನ್ನು ಸದನದಲ್ಲಿ ಮಂಡಿಸಿರುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–I)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಗೈರುಹಾಜರಿ ಬಗ್ಗೆ.

ಅಧ್ಯಕ್ಷರು : ಈಗ ಆಯವ್ಯಯದ ಮೇಲೆ ಚರ್ಚೆ ಆರಂಭವಾಗುತ್ತದೆ. ಮೊದಲಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪಕ್ಷದ ನಾಯಕರು ಆಯವ್ಯಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ, ಉಪ ಮುಖ್ಯಮಂತ್ರಿಗಳಾಗಲಿ ಇಲ್ಲ, ಯಾರೂ ಇಲ್ಲ ಎಂದರೆ ಹೇಗೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದರು, ಈಗ ಹೋಗಿದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಪ್ರಶ್ನೋತ್ತರ ಇರುವುದರಿಂದ ಅಲ್ಲಿದ್ದಾರೆ. ಮುಖ್ಯಮಂತ್ರಿಗಳವರನ್ನು ಕರೆಸುತ್ತೇನೆ. ಆಯಿತು, ಬರುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧ ಪಕ್ಷದ ನಾಯಕರು ಅಂದರೆ ಮರ್ಯಾದೆಯಿಲ್ಲವೇ? ಏತಕ್ಕೆ ಹೀಗೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ಹೇಗೆ?

ಅಧ್ಯಕ್ಷರು : ಆಯಿತು, ನೀವು ಕುಳಿತುಕೊಳ್ಳಿ, ಅವರು ಬರುವಂತೆ ಸೂಚನೆಗಳನ್ನು ಕೊಟ್ಟಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿನ್ನೆ ತಾನೆ ತಾವು ಇದ್ದರೂ ಅವರಿಗೆ ತಿಳಿಯುವುದಿಲ್ಲ ಎಂದರೆ ಏನರ್ಥ?

ಅಧ್ಯಕ್ಷರು : ನೋಡಿ ನಿಮ್ಮ ಡಿ.ಸಿ.ಎಮ್. ಮೇಲ್ಮನೆಯಲ್ಲಿದ್ದಾರೆ, ಸಂಸದೀಯ ಸಚಿವರೇ ಮುಖ್ಯಮಂತ್ರಿಯವರನ್ನು ಕರೆಸಿ.

ಶ್ರೀ ಆರ್. ರೋಷನ್‌ಬೇಗ್ : ಅಧಿಕಾರಿಗಳು ಎಲ್ಲಿದ್ದಾರೆ? where is the Chief Secretary and Finance Secretary?

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಅಧ್ಯಕ್ಷರೇ ಇವರಿಗೆ ಯಾವ ಭಾಷೆಯಲ್ಲಿ ಹೇಳಬೇಕು ನೀವೇ ಹೇಳಿ. ನಿನ್ನೆ ಹಾಗೂ ಇವತ್ತು ಕೂಡ ಹೇಳಿದ್ದೇವೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆಂದು ಗೊತ್ತು. ಈಗ 11 ಗಂಟೆಗೆ ತಾವೇ ಹೇಳಿದಿರಿ, ನಿನ್ನೆ ಮೂರು ಗಂಟೆಯಲ್ಲೂ ಇದೇ ರೀತಿಯಾಗಿತ್ತು. ಹೀಗಾದರೆ ಹೇಗೆ? ಇವರಿಗೆ ಯಾವ ಭಾಷೆಯಲ್ಲಿ ಹೇಳಿದರೆ ಅರ್ಥವಾಗುತ್ತದೆಯೋ ಅದೇ ಭಾಷೆಯಲ್ಲಿ ಹೇಳುತ್ತೇವೆ. This is too much.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು ನಿಜ. ಇದು ಅತಿ ಹೆಚ್ಚಾಯಿತು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮ್ಮ ಕಾರ್ಯಾಲಯದಲ್ಲಿ ನಡೆದಂತಹ ಮಾತಕತೆ ಏನು? ಪರಿಸ್ಥಿತಿ ಏನು?

ಅಧ್ಯಕ್ಷರು : ಆಯಿತು, ಬರುತ್ತಾರೆ, ಕುಳಿತುಕೊಳ್ಳಿ. ಹೇಳಿಕಳುಹಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಕುಳಿತುಕೊಳ್ಳಿ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್ : ತಾವೇನು ಮಾತನಾಡುತ್ತೀದ್ದೀರೆಂಬುದು ನನಗೆ ಅರ್ಥವಾಗಲಿಲ್ಲ, ಬರುತ್ತಾರೆ ನೀವು ಕುಳಿತುಕೊಳ್ಳಿ ಎಂದರೆ ಏನು ಸಾರ್? ನಾವು ಕುಳಿತುಕೊಂಡೇ ಬಿಡೋಣ? ಏನು ಚರ್ಚೆ ಮಾಡುವುದೇ ಬೇಡವೇ?

ಅಧ್ಯಕ್ಷರು : ಈಗ ಎಲ್ಲಾ ಮಾನ್ಯ ಸದಸ್ಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಈಗ ನಾನು ಹೇಳಿಕಳುಹಿಸಿದ್ದೇನೆ, ಬರುತ್ತಾರೆ. ಮುಖ್ಯಮಂತ್ರಿಗಳು ಇಲ್ಲಿಯವರೆಗೆ ಇಲ್ಲಿ ಕುಳಿತಿದ್ದರು, ಹೇಳಿ ಕಳುಹಿಸಿದ್ದೇನೆ, ಉಪಮುಖ್ಯಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಪದೇ ಪದೇ ನೀವುಗಳು ನನಗೆ ಚುಚ್ಚತಕ್ಕಂಥ ಮಾತುಗಳನ್ನು ಆಡುತ್ತೀರಿ. ನನಗೆ ಅರ್ಥವಾಗುವುದಿಲ್ಲ, I can't understand. ನಿಮಗೆ ಅಗ್ಗವಾಗಿ ಸಿಕ್ಕಿಬಿಟ್ಟಿದ್ದೇವೆ. ನಾವು I can't understand.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ನಿಮಗೆ ಚುಚ್ಚತಕ್ಕಂಥ ಮಾತನಾಡುತ್ತಿಲ್ಲ. ತಾವೇ ಅವರಿಗೆ ಹೇಳಿದರೂ ಅವರಿಗೆ ಅರ್ಥವಾಗುತ್ತಿಲ್ಲವಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಕರೆಸಿ ಎಂದು ನಾವು ತಮಗೆ ಹೇಳಬೇಕು, ತಮಗಲ್ಲದೆ ಇನ್ಯಾರಿಗೆ ಹೇಳಬೇಕು?

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ, ಎಲ್ಲದಕ್ಕೂ ಒಂದು ಮಿತಿ ಬೇಕು.

ಶ್ರೀ ಧರಂಸಿಂಗ್ : ಅಧ್ಯಕ್ಷರೇ, ಯಾರಿಗೆ ಬೇಕು ಮಿತಿ, ನಮಗೆ ಬೇಕೇ ಅಥವಾ ಅದು ಅವರಿಗೆ ಬೇಕಾ?

ಅಧ್ಯಕ್ಷರು : ಎಲ್ಲಾ ಸದಸ್ಯರಿಗೂ ಬೇಕು ಸ್ವಾಮಿ. ದಯಮಾಡಿ ವಿರೋಧ ಪಕ್ಷದ ನಾಯಕರು ಮಾತನಾಡಿ.